

ಹರಿವ ನದಿಗೂ ಉಂಟೇ ವಿಶ್ರಾಂತಿ!



ನೀರು ನಿಂತು ನೆಲವಾದೊಡೆ..

ಖರ್ದುಂಗ್ಲಾ ಪಾಸ್, ನುಬ್ರಾ ಕಣಿವೆಗಳಿಗೆ ಭೇಟಿ ನೀಡುತ್ತಾರೆ. ಲೇಹ್ ಪಟ್ಟಣ ಏಪ್ರಿಲ್‌ನಿಂದ ಜುಲೈವರೆಗೆ ಪ್ರವಾಸಿಗಳಿಂದ ತುಂಬಿ ತುಳುಕುತ್ತದೆ. ಆದರೆ ಮೇಲೆ ಹೇಳಿದ ಚಾದರ್ ಚಾರಣಕ್ಕೆ ತೆರಳಬೇಕೆಂದರೆ ಕೊಂಚ ಸಾಹಸ ಮಾಡಬೇಕಾಗುತ್ತದೆ. ಪ್ರವಾಸಕ್ಕೆ ಅನುಕೂಲವಾಗುವ ತಿಂಗಳುಗಳನ್ನು ಹೊರತುಪಡಿಸಿ, ಮೂಳೆ ಕೊರೆಯುವ ಚಳಿ ಇರುವ ಜನವರಿಯ ಕೊನೆಯಿಂದ ಮಾರ್ಚ್ ಮೊದಲ ವಾರ, ಲೇಹ್‌ಗೆ ಭೇಟಿ ನೀಡಬೇಕು! ಆಗ ಅಲ್ಲಿಯ ತಾಪಮಾನ, ಮೈನಸ್ ಹತ್ತು! ರಾತ್ರಿಯ ವೇಳೆಯಲ್ಲಿ ಮೈನಸ್ ಮೂವತ್ತಕ್ಕೆ ಹೋಗುವುದೂ ಇದೆ!

### ಚಾದರ್

ಲಡಾಖ್‌ನ ದಕ್ಷಿಣಕ್ಕೆ ಕಾರ್ಗಿಲ್ ಜಿಲ್ಲೆಯಲ್ಲಿ ಝಂಸ್ಕಾರ್ ಎಂಬ ಪ್ರದೇಶವಿದೆ. ಅಲ್ಲಿ ಹರಿಯುವ ಝಂಸ್ಕಾರ್ ನದಿಯಿಂದಾಗಿ ಆ ಹೆಸರು. ನೂರಕ್ಕೂ ಹೆಚ್ಚು ಕಿಲೋಮೀಟರುಗಳಷ್ಟು ವಿಸ್ತಾರವಾಗಿ ಹಬ್ಬಿರುವ ಪರ್ವತ ಶ್ರೇಣಿಗಳಿಂದಾಗಿ ಇಲ್ಲಿಗೊಂದು ವಿಶಿಷ್ಟ ಸೊಬಗಿದೆ. ಆ ಶ್ರೇಣಿಗಳ ನಡುವೆ ಹರಿಯುವ ನದಿಯೇ ಝಂಸ್ಕಾರ್. ಲಡಾಖ್‌ನ ಚಳಿಗಾಲ ಭಾರತದಲ್ಲಿಯೇ ಅತ್ಯಂತ ತೀವ್ರವಾದದ್ದು. ಮೈನಸ್ ಮೂವತ್ತು ನಲವತ್ತು ಡಿಗ್ರಿಗೆ ಇಳಿಯುವ ಇಲ್ಲಿನ ತಾಪಮಾನದಿಂದಾಗಿ ಈ ಹರಿವ ನದಿ ನಿಧಾನಕ್ಕೆ ಹೆಪ್ಪುಗಟ್ಟುತ್ತಾ ಹೋಗುತ್ತದೆ. ಡಿಸೆಂಬರ್‌ನಿಂದ ನಿಧಾನಕ್ಕೆ ಆರಂಭವಾಗುವ ಈ ಪ್ರಕ್ರಿಯೆಯಲ್ಲಿ ಜನವರಿ ಮುಗಿಯುವ ಹೊತ್ತಿಗೆ ಸುಮಾರು ನೂರು–ನೂರೈವತ್ತು ಕಿಲೋಮೀಟರ್ ಉದ್ದದ 'ಮಂಜಿನ ದಾರಿ' ನಿರ್ಮಾಣವಾಗುತ್ತದೆ! ಕೆಲವೆಡೆಗಳಲ್ಲಿ ಚಿಪ್ಸ್‌ನಷ್ಟು ತೆಳುವಾದ ಪದರವಿದ್ದರೆ, ಇನ್ನು ಕೆಲವೆಡೆ ಹತ್ತು ಟನ್ ಭಾರದ ಟ್ರಕ್ ಹೋದರೂ ಮಿಸುಕಾಡಷ್ಟು ಗಟ್ಟಿಯ ಹಾಸು!

ಝಂಸ್ಕಾರ್ ಕಣಿವೆಯಲ್ಲಿರುವ ಹಳ್ಳಿಗರಿಗೆ ಚಳಿಗಾಲದಲ್ಲಿ ಲೇಹ್ ಪಟ್ಟಣಕ್ಕೆ ಬರಬೇಕೆಂದರೆ, ಈ ಹಿಮಗಟ್ಟಿದ ನದಿಯೇ ಕಾಲುದಾರಿ! ನೆರಕ್, ಝಂಸ್ಕಾರ್, ಪದುಂ ಮೊದಲಾದ ಹಳ್ಳಿಗರಿಗೆ ಜೀವನಾವಶ್ಯಕ ವಸ್ತುಗಳನ್ನು ಲೇಹ್ ನಗರದಿಂದ ತರಬೇಕೆಂದರೆ ಈ ನಿತ್ಯ ಚಾರಣ ಅಗತ್ಯ. ಝಂಸ್ಕಾರ್ ಕಣಿವೆಯು 150 ಕಿಲೋಮೀಟರ್ ವಿಸ್ತಾರಕ್ಕೆ ಹಬ್ಬಿದೆ. ಕಡಿದಾದ ಗುಡ್ಡಬೆಟ್ಟಗಳ ನಡುವೆ ಬೇರೆ ದಾರಿಯೂ ಇಲ್ಲ. ಬೆಟ್ಟಗಳನ್ನು ಹಾದುಬರುವುದಕ್ಕಿಂತ, ಹೆಪ್ಪುಗಟ್ಟಿದ ನದಿಯ ಮೇಲೆ ನಡೆಯುವುದು ಸುಲಭ ಎಂಬ ಕಾರಣಕ್ಕಾಗಿ ಈ ಚಾದರ್ ಪ್ರಯಾಣ ಆರಂಭವಾಯಿತು. ಚಾದರ್ ಎಂದರೆ ಹಿಂದಿಯಲ್ಲಿ ಚಾಪೆ. ಹಿಮವು ಚಾಪೆಯಂತೆ ಹಬ್ಬಿರುವುದರಿಂದ ಚಾದರ್ ಅಥವ ಚದ್ದರ್ ಎಂದು ಹೆಸರು.

### ಚಾದರ್ ಚಾರಣ

ಹಳ್ಳಿಗರಿಗೆ ಅವಶ್ಯವಾದ, ಜೀವನೋಪಾಯಕ್ಕಾಗಿನ ನಡಿಗೆ, ನಿಧಾನಕ್ಕೆ ಹೊರಜಗತ್ತಿಗೂ ತಿಳಿಯಲಾರಂಭಿಸಿದ್ದು ಇಪ್ಪತ್ತೊಂದನೇ ಶತಮಾನದ ಮೊದಲಿಗಷ್ಟೇ. ಲಡಾಖೀಗಳ ಪಾಲಿಗೆ ಅನಿವಾರ್ಯವಾದ ಈ ಪ್ರಯಾಣ, ಚಾರಣಿಗರಿಗೆ, ಸಾಹಸಪ್ರಿಯರಿಗೆ ಮೆಚ್ಚಿನ ಸಂಗತಿ. ಲಡಾಖ್‌ಗೆ ಬರುವ ಪ್ರವಾಸಿಗರಿಗೂ, ಹೊಸ ಆಕರ್ಷಣೆಯೊಂದು ಸೇರ್ಪಡೆಯಾದಂತಾಯಿತು. ಚಾರಣ ಆಯೋಜಿಸುವ ಹಲವು ಸಂಸ್ಥೆಗಳು ಚಾದರ್ ಟ್ರೆಕ್ ಆರಂಭಿಸಿದರು. ಜಗತ್ತಿನ ಹಲವಾರು ಜಾಲತಾಣಗಳು, ಸಾಯುವುದರೊಳಗೆ ಮಾಡಬೇಕಾದ ಸಾಹಸಗಳಲ್ಲಿ ಈ ಚಾದರ್ ಚಾರಣವನ್ನೂ ಸೇರಿಸಿವೆ. ಹಿಮಗಟ್ಟಿದ ಚಾದರ್ ಮೇಲೆ ಎಪ್ಪತ್ತೈದು ಕಿಲೋಮೀಟರ್ ನಡೆಯುವ ಈ ಅನುಭವವು ನಿಜಕ್ಕೂ ರೋಮಾಂಚನಕಾರಿ, ಚೇತೋಹಾರಿ. ಆದರೆ ತೀವ್ರ ಚಳಿಗಾಲದಲ್ಲಷ್ಟೇ ಸಾಧ್ಯವಾಗುವ ಈ ಯಾನ, ಜನವರಿ ಅಂತ್ಯದಿಂದ ಮಾರ್ಚ್ ಮಧ್ಯಭಾಗದವರೆಗಷ್ಟೇ ಸಾಧ್ಯ. ನಂತರ ಚಳಿ ಕಡಿಮೆಯಾಗಿ, ದಿನೇ ದಿನೇ ಹಿಮ ಕರಗುತ್ತಾ ಬಂದು ಏಪ್ರಿಲ್ ಹೊತ್ತಿಗೆ ಚಾದರ್, ನದಿಯಾಗಿ ಮರಳಿಬಿಡುತ್ತದೆ.

### ಹೊರಡುವ ಮುನ್ನ

ಹಾಂ, ಇಷ್ಟೆಲ್ಲ ಓದಿದ ಮೇಲೆ 'ನಾನೂ ಹೊರಟೆ ಹಾಗಾದರೆ' ಎಂದು ಹೊರಟುಬಿಡಬೇಡಿ. ಚಾದರ್ ಚಾರಣಕ್ಕೆ ಮುನ್ನ ಒಂದಿಷ್ಟು ಪೂರ್ವ ಸಿದ್ಧತೆಗಳು ಅತ್ಯವಶ್ಯಕ. ಹೆಜ್ಜೆ ಕಿತ್ತಿಡಲೂ ಅಸಾಧ್ಯವಾದ ಅಲ್ಲಿನ ಚಳಿ ಮತ್ತು ಒಣ ಹವೆಗೆ ಸಮರ್ಪಕ ಸಜ್ಜುಗೊಳುವಿಕೆ ಬೇಕೇಬೇಕು. ಬೆಚ್ಚನೆ ಬಟ್ಟೆಗಳು, ಜಾಕೆಟ್‌ಗಳು, ಕೈಗವಸುಗಳು, ಗಂಬೂಟ್, ಥರ್ಮಲ್ ವೇರ್ ಅಗತ್ಯ. ಸುಮಾರು ಹತ್ತು ದಿನಗಳ ಕಾಲ ನಡೆಯುವ ಈ ಚಾರಣಕ್ಕೆ ದೈಹಿಕ ಸಾಮರ್ಥ್ಯವೂ ಬೇಕು. ಹಿಮಾಲಯದಲ್ಲಿ, ಸುಮಾರು ಹತ್ತುಸಾವಿರ ಅಡಿಗಳ ನಂತರ ಗಾಳಿ ತೆಳುವಾಗುತ್ತದೆ. ಲಡಾಖ್‌ನಲ್ಲಿ ಮರಗಿಡಗಳೂ ಕಡಿಮೆಯಿದ್ದು, ಗಾಳಿಯಲ್ಲಿನ ಆಮ್ಲಜನಕದ ಅಂಶ ಇತರೆಡೆಗಳಿಗಿಂತ ಕಡಿಮೆ. ಜೊತೆಗೆ ಚಳಿಯೂ ಸೇರಿಕೊಂಡು ಉಸಿರಾಡಲು ಕಷ್ಟವಾಗುತ್ತದೆ. ಹೀಗಾಗಿ ವ್ಯಾಯಾಮ, ಜಾಗಿಂಗ್ ಮೊದಲಾದ ಚಟುವಟಿಕೆಗಳನ್ನು ಮಾಡಿ ದೇಹವನ್ನು ಸಿದ್ಧಗೊಳಿಸಿಕೊಂಡಿರುವುದು ಉತ್ತಮ. ತೀವ್ರ ಚಳಿಯಲ್ಲಿನ ನಡಿಗೆ, ಅಪಾರವಾದ ಶ್ರಮವನ್ನು ಬೇಡುತ್ತದೆ. ವಿಪರೀತ ಶೀತ ಹವಾಮಾನದಲ್ಲಿ ಊಟ ತಿಂಡಿಯೂ ಸರಿಯಾಗಿ ಸೇರದು. ಮೈಮೇಲೆ ಸುಮಾರು ಐದಾರು ಜೊತೆ ಬಟ್ಟೆಗಳನ್ನೂ ಜಾಕೆಟ್ ಅನ್ನೂ ಧರಿಸಿ, ಬೆನ್ನ ಮೇಲೊಂದು ಭಾರದ ಬ್ಯಾಗು ಹೊತ್ತು ನಡೆಯಲು ಅಭ್ಯಾಸ ಬೇಕೇ ಬೇಕು.

### ಹಿಮಹಾಳೆಯ ನಡಿಗೆ

ಚಾದರ್ ಚಾರಣ ಆರಂಭಿಸಲು ಲೇಹ್‌ನಿಂದ ಐದು ತಾಸುಗಳ ಪ್ರಯಾಣ ಮಾಡಬೇಕು. ತಿಲತ್ ಸುಮ್ಡೋ ಎಂಬ ಜಾಗದಿಂದ ಚಾದರ್ ಪಯಣ ಶುರುವಾಗುತ್ತದೆ. ಝಂಸ್ಕಾರ್ ನದಿ ಇಲ್ಲಿಂದ ಮುಂದಕ್ಕೆ ಹರಿದು ಸಿಂಧೂ ನದಿಯನ್ನು ಸೇರುತ್ತದೆ. ನಮ್ಮ ಪ್ರಯಾಣ ಇಲ್ಲಿಂದ ಮೇಲುದಿಕ್ಕಿಗೆ. ಝಂಸ್ಕಾರ್ ಹರಿದು ಬರುವ ಕಡೆಗೆ. ಹಾಡು ಹಗಲು, ಮಧ್ಯಾಹ್ನದ ಹೊತ್ತಿಗೂ, –7, –8 ಡಿಗ್ರಿಯ ಚಳಿ! ನಮ್ಮ ತಂಡದ ಶೆರ್ಪಾಗಳು ಟೆಂಟ್ ಹಾಕಿ ನೋಡನೋಡುತ್ತಿದ್ದಂತೆ ಬಿಸಿಬಿಸಿಯ ರೋಟೀದಾಲ್ ಸಿದ್ಧಪಡಿಸಿದ್ದರು. ಆ ಚಳಿಯಲ್ಲಿ ನಾಲಿಗೆಗೆ ಏನೂ ರುಚಿಸದೇ ಹೋದರೂ, ತಿನ್ನುವುದು ಅನಿವಾರ್ಯ! ಇಕ್ಕೆಲಗಳಲ್ಲೂ ಮಂಜುಗಟ್ಟಿರುವ ನದಿ, ಮಧ್ಯ ಸಣ್ಣ ಹರಿವು. ಸುತ್ತಲೂ ಬೋಳು ಬೆಟ್ಟಗಳು. ನಿಧಾನಕ್ಕೆ ಬೆಟ್ಟದಾಚೆಗೆ ಕಾಣೆಯಾದ